# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 121/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹೇಂದ್ರ ಅಲಿಯಾಸ್ ಗಣೇಶ್ | ಪಿಡಬ್ಲ್ಯೂ : 9 |
| ತಂದೆಯ / ಗಂಡನ ಹೆಸರು | : ವೀರಭದ್ರಪ್ಪ | ಸಿಡಬ್ಲ್ಯೂ : 10 |
| ವಯಸ್ಸು | : 34 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸಸ್ಥಳ | : ಕಾವೇರಿನಗರ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 18.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ಈ ಪ್ರಕರಣದ ಸಾಕ್ಷಿದಾರರಾದ ಚಾಸಾ.2, 9, 12 ರವರ ಪರಿಚಯ ಇರುತ್ತದೆ. ಚಾಸಾ.3 ನನ್ನ ತಂದೆಯಾಗಬೇಕು, ಚಾಸಾ.11 ನನ್ನ ತಾಯಿ ಆಗಬೇಕು. ನಾನು ಕಾವೇರಿನಗರದಲ್ಲಿ ವಾಸವಾಗಿರುತ್ತೇನೆ.

3. ಈಗ 7 ವರ್ಷಗಳ ಹಿಂದೆ ನಾನು ಶಿವರಾತ್ರೇಶ್ವರನಗರದ ಆಟೋ ಸ್ಟಾಂಡ್ ಬಳಿ ನನ್ನ ಆಟೋವನ್ನು ನಿಲ್ಲಿಸಿಕೊಂಡು ನಿಂತಿರುತ್ತೇನೆ. ರಾತ್ರಿ 08.30 ರ ಸುಮಾರಿಗೆ ನನಗೆ ಒಂದು ಫೋನ್ ಕರೆ ಬಂದಿದ್ದು , ಫೋನ್ ನಲ್ಲಿ 1 ನೇ ಆರೋಪಿ ಹರೀಶ್ , ಭರತ್ , ಕೀರ್ತಿ, ಮಂಜ ಮತ್ತು ಮಂಜುನಾಥ ಚಾಸಾ.2 ನಾರಾಯಣಸ್ವಾಮಿ ಅವರಿಗೆ 5 ಜನ ಸೇರಿ

ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಾನು ನನ್ನ ಆಟೋವನ್ನು ತೆಗೆದುಕೊಂಡು ನೇರವಾಗಿ ಘಟನೆಯಾದ ಸ್ಥಳಕ್ಕೆ ಬಂದಿರುತ್ತೇನೆ. ನಾನು ಸ್ಥಳಕ್ಕೆ ಬಂದು ನೋಡಿದಾಗ 1 ನೇ ಅರೋಪಿ ಹರೀಶ ಲಾಂಗ್ ನ್ನು ಹಿಡಿದುಕೊಂಡು ಮತ್ತು ಚನ್ನರಾಯಪಟ್ಟಣದ ಮಂಜು ಇಬ್ಬರೂ ಉನ್ನತಿನಗರದ ಕಡೆ ಓಡಿ ಹೋಗುತ್ತಿದ್ದರು. 5 ನೇ ಆರೋಪಿ ಮಂಜುನಾಥ ಅಲಿಯಾಸ್ ಗುಂಡ 2 ನೇ ಆರೋಪಿ ಭರತ್ ಮತ್ತು 3 ನೇ ಆರೋಪಿ ಕೀರ್ತಿ I–10 ಕಾರ್ ನಲ್ಲಿ ಹತ್ತಿಕೊಂಡು ಬೆಳವತ್ತಾ ಕಡೆ ಹೋಗುತ್ತಿದ್ದರು. 5 ನೇ ಆರೋಪಿ ಕೈಯಲ್ಲಿ ಚಾಕು ಇತ್ತು.

4. ನಾನು ಸ್ಥಳಕ್ಕೆ ಬಂದು ನೋಡಿದಾಗ ನಾರಾಣಯರವರ ಎಡಗೈ ಗೆ ಏಟಾಗಿ ರಕ್ತ ಬರುತ್ತಿತು. ಕುತ್ತಿಗೆ ಭಾಗದಲ್ಲಿ ಕೂಡ ಏಟಾಗಿ, ಬಲಭಾಗದ ಪಕ್ಕೆಲುಬು ಬಳಿ ಚುಚ್ಚಿದ್ದು, ಅವರನ್ನು ನಾನು ಆಟೋದಲ್ಲಿ ಕೂರಿಸಲು ಪ್ರಯತ್ನಿಸಿದಾಗ ಆಗಿರುವುದಿಲ್ಲ. ನಂತರ ಚಂದ್ರು ಕಾರ್ ನ್ನು ತೆಗದುಕೊಂಡು ಬಂದಿದ್ದು, ಸದರಿ ಕಾರಿನಲ್ಲಿ ಗಾಯಗೊಂಡಿದ್ದ ಚಾಸಾ.2 ರವರನ್ನು ಕೂರಿಸಿಕೊಂಡು ಕೊಲಂಬಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಕಾಲಕ್ಕೆ ಯಾರು ಹಲ್ಲೆ ಮಾಡಿರುತ್ತಾರೆ ಎಂಬುದರ ಬಗ್ಗೆ ವಿಚಾರಿಸಿರುತ್ತೇನೆ. ಆಗ ಚಾಸಾ.2 ರವರು ಆರೋಪಿತರು ಆತನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದನು. ನಾನು ಅವರನ್ನು ಆಸ್ಪತ್ರೆಗೆ ದಾಖಲು ಮಾಡಿ ರಾತ್ರಿ 12.00 ಗಂಟೆಯವರೆಗೆ ಅಲ್ಲಿಯೇ ಇದ್ದು, ನಾನು ನಂತರ ವಾಪಾಸ್ ಮನೆಗೆ ಬಂದಿರುತ್ತೇನೆ. ಪೊಲೀಸರು ನನಗೆ ಘಟನೆಯ ಬಗ್ಗೆ ವಿಚಾರಿಸಿದ್ದು , ಅವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

5. ಘಟನೆಯಾದ ಒಂದು ತಿಂಗಳ ನಂತರ ಪೊಲೀಸರು ನನ್ನನ್ನು ಮತ್ತು ನಟರಾಜ್ ನ್ನು ಠಾಣೆಗೆ ಕರೆಸಿದ್ದರು. ನಟರಾಜ್ ಚಾಸಾ.9 ರವರು ಈಗ ಜೀವಿತ ಇರುವುದಿಲ್ಲ. ಅವರು 3 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನಾನು ಠಾಣೆಗೆ ಹೋದಾಗ ಪೊಲೀಸರು ಪಂಚರಾಗಲು ನೋಟೀಸ್ ನ್ನು ನೀಡಿರುತ್ತಾರೆ. ಪಂಚರಾಗಲು ಒಪ್ಪಿಕೊಂಡಾಗ ಬಾಂಡ್ ಗೂ ಕೂಡ ಸಹಿ ಮಾಡಿರುತ್ತೇನೆ. ಸಾಕ್ಷಿಯೂ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.30 ಎಂದು, ಸಾಕ್ಷಿಯ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಬಾಂಡ್ ನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ. 31 ಎಂದು , ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು.

6. ನಾನು ಠಾಣೆಗೆ ಹೋದಾಗ ಸಮಯ ಬೆಳಿಗ್ಗೆ 11.50 ಆಗಿರುತ್ತದೆ. ಪೊಲೀಸ್ ಠಾಣೆಯಲ್ಲಿ ನಾನು ಹೋದಾಗ 5 ನೇ ಆರೋಪಿ ಅಲ್ಲಿ ಇದ್ದನು. ಆತ ಈ ದಿನ ನ್ಯಾಯಾಲಯದಲ್ಲಿ ಇರುತ್ತಾನೆ. ನಂತರ ಪೊಲೀಸ್ ಠಾಣೆಯಿಂದ 5 ನೇ ಆರೋಪಿ, ಪೊಲೀಸರು ಮತ್ತು ನಾವುಗಳು ಪೊಲೀಸ್ ಜೀಪಿನಲ್ಲಿ ಸತ್ಯ ಶಾಪ್ ಬಳಿ ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ಚಾಸಾ.2 ರವರನ್ನು ಹೊಡೆಯಲು ಮಾತನಾಡಿದ ಸ್ಥಳ ಎಂದು 5 ನೇ ಆರೋಪಿ ತೋರಿಸಿರುತ್ತಾರೆ. ಸದರಿ ಸ್ಥಳದಿಂದ ಘಟನೆಯಾದ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿ 5 ನೇ ಆರೋಪಿ ಚಾಸಾ.2 ರವರ ಮೇಲೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿರುತ್ತಾರೆ.

7. ನಂತರ ಜಿ ಆರ್ ಎಸ್ ಪಾರ್ಕ್ ನ ಪಕ್ಕದಲ್ಲಿ ಇರುವ ಮಾವಿನ ತೋಪಿನ ಬಳಿ ಹೋಗಿರುತ್ತೇವೆ. ಅಲ್ಲಿ ಒಂದು I–10 ಕಾರ್ ನಿಂತಿದ್ದು, ಅದನ್ನು 5 ನೇ ಆರೋಪಿ ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಇದ್ದಾಗ ಪೊಲೀಸರು ಚಾಸಾ–2 ರವರು ಸ್ಥಳಕ್ಕೆ ಬರಮಾಡಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಕಾರಿನ ಡಿಕ್ಕಿಯನ್ನು ತೆಗೆದು ಮ್ಯಾಟ್ ಕೆಳಗಡೆ

ಚಾಕುವನ್ನು ತೊಳೆದು ಇಟ್ಟಿರುವುದಾಗಿ ತೋರಿಸಿರುತ್ತಾರೆ. ನಂತರ ಪೊಲೀಸರು ಸದರಿ ಚಾಕುವನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿ, ಪಡೆದುಕೊಂಡಿರುತ್ತಾರೆ. ಸದರಿ ಚಾಕುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಎಂಒ-2 ನ್ನು ನೋಡಿ ಗುರುತಿಸಿರುತ್ತಾರೆ. ಅದರ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಸ್ಥಳದಲ್ಲಿ ಪೋಟೋಗಳನ್ನು ಸಹ ತೆಗೆದಿರುತ್ತಾರೆ ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ಪೊಲೀಸ್ ಠಾಣೆಯಲ್ಲಿ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.12.10.2018 ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪೋಟೋಗಳನ್ನು ಸಹ ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಪೊಲೀಸ್ ಠಾಣೆಯ ಬಳಿ ತೆಗೆದ ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.32 ಎಂದು, ಸಾಕ್ಷಿಯೂ ಸತ್ಯಪ್ಪನ ಅಂಗಡಿಯ ಬಳಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.33 ಎಂದು ಗುರುತಿಸಲಾಯಿತು. ಸಾಕ್ಷಿಯೂ ಘಟನಾ ಸ್ಥಳದ ಬಳಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.34 ಎಂದು ಗುರುತಿಸಲಾಯಿತು. ಸಾಕ್ಷಿಯೂ ಕಾರಿನ ಬಳಿ ತೆಗೆದ ಪೋಟೋವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.11 ರಿಂದ 20 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

8. ಕಾರ್ ನ್ನು ಅಮಾನತ್ತುಪಡಿಸಿಕೊಂಡ ಸ್ಥಳದಲ್ಲಿ ಮಹಜರ್ ನ್ನು ಕೊನೆಗೊಳಿಸಿ, ಸದರಿ ಮಹಜರ್ ಗೆ ಸ್ಥಳದಲ್ಲಿ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ಬೇಕರಿಯ ಬಳಿಯಲ್ಲಿಯೂ ಕೂಡ ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ</u>**

9. ಈ ಪ್ರಕರಣದಲ್ಲಿ ಸಾಕ್ಷಿದಾರರಾದ ನಾಗಲಾಂಬಿಕೆ ನನ್ನ ತಾಯಿ. ಈ ಪ್ರಕರಣದಲ್ಲಿ ಗಾಯಾಳುವಾದ ವ್ಯಕ್ತಿ ನನಗೆ ಚಿಕ್ಕಂದಿನಿಂದ ಪರಿಚಯ ಇರುತ್ತಾರೆ. ಕಾವೇರಿನಗರದಲ್ಲಿ ನಾವು ಬಾಡಿಗೆಗೆ ಇದ್ದಾಗ ಸದರಿಯವರು ನನಗೆ ಪರಿಚಯವಾಗಿರುತ್ತಾರೆ. ನಮ್ಮ ಮತ್ತು ಗಾಯಾಳುವಿನ ಒಡನಾಟ ಚೆನ್ನಾಗಿರುತ್ತದೆ.

10. ಘಟನೆ ನಡೆಯಿತು ಎಂದು ಹೇಳಲಾದ ಸಮಯದಲ್ಲಿ ನಾನು ಶಿವರಾತ್ರೇಶ್ವರನಗರದ ಆಟೋ ಸ್ಟಾಂಡ್ ನಲ್ಲಿ ಇದ್ದು, ಸದರಿ ಆಟೋ ಸ್ಟಾಂಡ್ ಗೂ ಮತ್ತು ಘಟನಾ ಸ್ಥಳಕ್ಕೂ 400 ಮೀಟರ್ ಅಂತರ ಇರುತ್ತದೆ. ನೀವು ಸ್ಥಳಕ್ಕೆ ಹೋದಾಗ ಗಾಯಾಳು ಎಲ್ಲಿ ಬಿದಿದ್ದರು ಎಂದರೆ ಸಾಕ್ಷಿಯೂ ಗಾಯಾಳು ಒಂದು ಲೈಟ್ ಕಂಬದ ಪಕ್ಕದಲ್ಲಿ ರಸ್ತೆಯ ಮೇಲೆ ಬಿದ್ದಿದ್ದರು ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಸುಮಾರು

15 ಜನ ಸೇರಿದ್ದರು. ನಾನು ಸ್ಥಳಕ್ಕೆ ಹೋಗಿ ವಿಚಾರಿಸಿದಾಗ ಗಲಾಟೆ ಆಯಿತು ಎಂದು ತಿಳಿದು ಬಂದಿರುತ್ತದೆ.

11. ನೀವು ಹೋಗಿ ನೋಡಿದಾಗ ಅವರಿಗೆ ಎಲ್ಲಿ ಏಟಾಗಿತ್ತು ಎಂದರೆ ಸಾಕ್ಷಿಯೂ ಕತ್ತಿನ ಭಾಗದಲ್ಲಿ, ಎಡಗೈ ಮತ್ತು ಬಲಭಾಗದ ಹೊಟ್ಟೆಯ ಭಾಗದಲ್ಲಿ ಏಟಾಗಿತ್ತು ಎಂದು ನುಡಿಯುತ್ತಾರೆ. ಯಾರು ಫೋನ್ ಕರೆ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಯಾರು ಕರೆ ಮಾಡಿರುತ್ತಾರೆ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸ್ಥಳಕ್ಕೆ ಹೋದಾಗ ನಾನೇ ಫೋನ್ ಕರೆ ಮಾಡಿರುತ್ತಾನೆ ಎಂದು ಯಾರಾದರೂ ಹೇಳಿರುತ್ತಾರೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ ನನಗೆ, ಈ ನಂಬರ್ ನಿಂದ ಫೋನ್ ಕರೆ ಬಂದಿರುತ್ತದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

12. ಆರೋಪಿಗಳು ನನಗೆ 15-16 ವರ್ಷಗಳ ಇಂದ ಪರಿಚಯ ಇದ್ದು, ಸ್ನೇಹಿತರಾಗಿರುತ್ತೇವೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿ ಮತ್ತು 5 ನೇ ಆರೋಪಿ ಉನ್ನತಿನಗರದ ಕಡೆ ಹೋದರು ಎಂದು ಹೇಳಿದ್ದು, ಶಿವರಾತ್ರೇಶ್ವರನಗರದಿಂದ ಘಟನಾ ಸ್ಥಳಕ್ಕೆ ಬರಬೇಕಾದರೆ ಉನ್ನತಿನಗರ ಸಿಗುವುದಿಲ್ಲ ಎಂದರೆ ಸಾಕ್ಷಿಯೂ ಸಿಗುತ್ತದೆ ಎಂದು ನುಡಿಯುತ್ತಾರೆ. ಸದರಿ ಘಟನಾ ಸ್ಥಳದಿಂದ ಉನ್ನತಿನಗರ ಯಾವ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯೂ ಶಿವರಾತ್ರೇಶ್ವರನಗರದ ಎದುರುಗಡೆ ಇರುತ್ತದೆ ಎಂದು ನುಡಿಯುತ್ತಾರೆ.

13. ಫೋನ್ ನಲ್ಲಿ ಯಾರು ಯಾರು ಹಲ್ಲೆ ಮಾಡಿರುತ್ತಾರೆ ಎಂದು ವಿವರಗಳನ್ನು ತಿಳಿಸಿದರು ಎಂದು ಹೇಳಿದ್ದು, ಹಲ್ಲೆ ಮಾಡುವ ಸಮಯದಲ್ಲಿ ಅವರನ್ನು ಹಿಡಿದುಕೊಳ್ಳಲು ಯಾರು ಪ್ರಯತ್ನಿಸಿಲ್ಲವೆ ಎಂದರೆ ಸಾಕ್ಷಿಯೂ ಒಬ್ಬರ ಕೈ ಯಲ್ಲಿ ಮಚ್ಚು ಮತ್ತು ಇನ್ನೊಬ್ಬರ

ಕೈಯಲ್ಲಿ ಚಾಕು ಇತ್ತು ಎಂದು ನುಡಿಯುತ್ತಾರೆ. ಈ ರೀತಿ ಲಾಂಗು ಮತ್ತು ಚಾಕುವನ್ನು ಹಿಡಿದುಕೊಂಡು ಉನ್ನತಿನಗರದ ಕಡೆ ಹೋಗುತ್ತಿದ್ದರು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರ್ ಕಾಲದಲ್ಲಿ ಚಾಕು ಸಿಕ್ಕಿರುತ್ತದೆ ಎಂದು ಹೇಳಿದ್ದು, ಘಟನಾ ಸಮಯದಲ್ಲಿ ನೋಡಿದ ಚಾಕು ಇದೇ ಎಂದು ಮಹಜರ್ ನಲ್ಲಿ ಬರೆಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

14. ಉನ್ನತಿನಗರ ಮತ್ತು ಘಟನೆಯಾಯಿತು ಎಂದು ಹೇಳುವ ಸ್ಥಳ ಇರುವ ನಗರಗಳು ಈಗ ಹೊಸದಾಗಿ ಮಾಡಲಾಗಿರುತ್ತದೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳಲಾದ ಸಮಯದಲ್ಲಿ ಮನೆಗಳು ಅಲ್ಲಲ್ಲಿ ವಿರಳವಾಗಿದ್ದವು ಎಂದರೆ ಸಾಕ್ಷಿಯೂ ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಹಳೆಯ ಮನೆಗಳು ಇದ್ದು, ಇನ್ನೊಂದು ಭಾಗದಲ್ಲಿ ಮನೆಗಳು ಆಗುತ್ತಿದ್ದವು ಎಂದು ನುಡಿಯುತ್ತಾರೆ. ಅದೇ ರೀತಿ ಉನ್ನತಿನಗರ ಕೂಡ ಹೊಸದಾಗಿ ಆಗಿದ್ದು, ಅಲ್ಲಲ್ಲಿ ಮನೆಗಳು ಇದ್ದವು ಎಂದರೆ ಸರಿ. ಅದೇ ರೀತಿ ಹೊಸದಾಗಿ ಮಾಡಿರುವ ಬಡಾವಣೆಗಳಲ್ಲಿ ಅಲ್ಲಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟು ಬಿಡಲಾಗಿತ್ತು ಎಂದರೆ ಸಾಕ್ಷಿಯೂ ದೂರ ದೂರದಲ್ಲಿ ಕಂಬಗಳನ್ನು ಹಾಕಲಾಗಿತ್ತು ಎಂದು ನುಡಿಯುತ್ತಾರೆ.

15. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ ಚಾಕುವನ್ನು ನೋಡಿರುತ್ತೇನೆ ಎಂದು ಹೇಳಿದ್ದು, ಅದೇ ರೀತಿ ಪಂಚನಾಮೆ ಕಾಲದಲ್ಲಿ ನೋಡಿರುತ್ತೇನೆ ಎಂದು ಹೇಳಿದ್ದು, ಸದರಿ ಚಾಕು ಅದೇ ಎಂದು ಗುರುತಿಸಲೂ ಯಾವುದಾರೂ ವಿಶೇಷ ಗುರತು ಮಾಡಿಕೊಂಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

ಚಾಕುವನ್ನು ಮೊದಲನೇ ಬಾರಿ ನೋಡಿದಾಗ ಅದಕ್ಕೆ ರಕ್ತ ಆಗಿರುತ್ತದೆಯೇ ಎಂದರೆ ಸಾಕ್ಷಿಯೂ ರಕ್ತ ಆಗಿರಲಿಲ್ಲ ಎಂದು ನುಡಿಯುತ್ತಾರೆ.

**16.** ಮೊದಲನೇ ಬಾರಿಗೆ ಪಂಚನಾಮೆಗೆ ಎಲ್ಲಿ ಮತ್ತು ಯಾರು ಯಾರು ಸೇರಿಕೊಂಡಿರುತ್ತೀರಿ ಎಂದರೆ ಸಾಕ್ಷಿಯೂ ಮೊದಲಿಗೆ ಪೊಲೀಸ್ ಠಾಣೆಯಲ್ಲಿ ಸೇರಿಕೊಂಡಿದ್ದು , ನನ್ನ ಜೊತೆ ಚಾಸಾ.9 ರವರು ಇದ್ದು, ಪೊಲೀಸರ ಬಳಿ 5 ನೇ ಆರೋಪಿ ಇದ್ದರು ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಯಾವುದೇ ಬರವಣಿಗೆ ಆಗಿರುವುದಿಲ್ಲ. ಪೊಲೀಸರು ನಿಮ್ಮ ಮುಂದೆ 5 ನೇ ಆರೋಪಿಯನ್ನು ವಿಚಾರಿಸಿರುತ್ತಾರೆಯೇ ಮತ್ತು ಏನೆಂದು ವಿಚಾರಿಸಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರು ನನ್ನ ಮುಂದೆ 5 ನೇ ಆರೋಪಿಯನ್ನು ವಿಚಾರಿಸಿದ್ದು, ನಂತರ ಆತನನ್ನು ಜೀಪ್ ಹತ್ತು ಎಂದು ಹೇಳಿ ಆತನಿಗೆ ಮತ್ತು ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

**17.** ಬೇಕರಿಯ ಬಳಿ ಹೋಗುವಂತೆ ಪೊಲೀಸರಿಗೆ ನೀವು ಹೇಳಿರುತ್ತೀರಿಯೇ ಅಥವಾ ಪೊಲೀಸರು ಹೇಳಿರುತ್ತಾರೆಯೇ ಎಂದರೆ ಸಾಕ್ಷಿಯೂ ಆರೋಪಿ ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯ ಬಗ್ಗೆ ನನ್ನ ಮುಂದೆ ಬರವಣಿಗೆ ಆಗಿರುವುದಿಲ್ಲ. ನಾವೆಲ್ಲರೂ ಪೊಲೀಸ್ ಜೀಪ್ ನಲ್ಲಿ ಬೇಕರಿಯ ಬಳಿ ಹೋಗಿರುತ್ತೇವೆ. ಆ ಸಮಯದಲ್ಲಿ 5 ನೇ ಆರೋಪಿ ಓಡಿ ಹೋಗಬಾರದು ಎಂದು ಕ್ರಮ ವಹಿಸಿ, ಕೋಳ ಆಗಿರುತ್ತಾರೆಯೇ ಅಥವಾ ಹಾಗೆ ಬಿಟ್ಟರುತ್ತಾರೆಯೇ ಎಂದರೆ ಸಾಕ್ಷಿಯೂ ಹಾಗೆ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸ್ ಜೀಪು ನೇರವಾಗಿ ಬೇಕರಿಯ ಬಳಿ ಹೋಗಿರುತ್ತದೆ. ಬೇಕರಿಯ ಬಳಿ ಹೋಗುವಂತೆ ವಾಹನದ ಚಾಲಕನಿಗೆ ಪೊಲೀಸರು ಹೇಳಿರುತ್ತಾರೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಜೀಪು ಇಳಿದ ತಕ್ಷಣ ಮೊದಲು

ಯಾರು ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರು ಮತ್ತು ಗುಂಡ ಇಳಿದು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಅವರು ಎಲ್ಲಿ ಹೋಗಿರುತ್ತಾರೆ ಎಂದು ಕಂಡಿರುತ್ತದೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಮತ್ತು ಗುಂಡ ಸ್ಥಳಕ್ಕೆ ಹೋದ 5 ನಿಮಿಷಕ್ಕೆ ನಮಗೆ ಬರಲು ಹೇಳಿದ್ದರು. ನಾವು ಅಲ್ಲಿಗೆ ಹೋದಾಗ ಯಾವುದೇ ವಸ್ತು ಅಲ್ಲಿ ಇರಲಿಲ್ಲ. ನಾನು ಸದರಿ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನೀವು ಸಹಿ ಮಾಡಿದ ದಾಖಲೆಗೆ ಪೊಲೀಸರು ಮತ್ತೇ ಬರವಣಿಗೆ ಮಾಡಿ ಕರೆದುಕೊಂಡು ಹೋಗಿರುತ್ತಾರೆಯೇ ಅಥವಾ ಅಲ್ಲಿಯೇ ಮುಕ್ತಾಯ ಮಾಡಿರುತ್ತಾರೆಯೇ ಎಂದರೆ ಸಾಕ್ಷಿಯೂ ಅಲ್ಲಿ ಮುಕ್ತಾಯ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಅಭಿಯೋಜಕರು ಪ್ರಶ್ನಿಸಿದಾಗ ಬೇಕರಿಯ ಬಳಿ ಮಾಮೂಲು ಕಾಗದಕ್ಕೆ ಸಹಿ ಮಾಡಿರುತ್ತೇನೆ ಹೇಳಿರುತ್ತೇನೆ ಎಂದರೆ ಸರಿ.

18. ಸಾಕ್ಷಿಗೆ ನಿಪಿ.3 ನ್ನು ತೋರಿಸಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಲು ಕೇಳಿದಾಗ ಸಾಕ್ಷಿಯೂ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮಹಜರ್ ನ ಮೊದಲನೇ ಪುಟದಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ.3(ಡಿ) ಎಂದು ಗುರುತಿಸಲಾಯಿತು. ಮುಂದೆ ಹೋದ ಹಾಗೆ ದಾಖಲೆಗೆ ಸಹಿ ಮಾಡುತ್ತಾ ಹೋಗಿರುತ್ತೀರೋ ಅಥವಾ ಕೊನೆಯಲ್ಲಿ ಸಹಿ ಮಾಡಿರುತ್ತೀರೋ ಎಂದರೆ ಸಾಕ್ಷಿಯೂ ಕೊನೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.3 ರಲ್ಲಿ ಇರುವ ಒಕ್ಕಣೆಯನ್ನು ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯೂ 5 ನೇ ಆರೋಪಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರವಣಿಗೆ

ಮಾಡಲಾಗಿರುತ್ತದೆ ಎಂದು ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

19. ನಿಪಿ.3 ರಲ್ಲಿಯ 2 ನೇ ಮತ್ತು 3 ನೇ ಪುಟದಲ್ಲಿ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಸಹಿ ಪಡೆದಿರುವುದಿಲ್ಲ ಎಂದು ತಿಳಿದುಕೊಂಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನಿಪಿ.3 ರಲ್ಲಿ ಬರವಣಿಗೆ ಮಾಡಬೇಕಾಗಿದ್ದರಿಂದ ನಿಪಿ.3 ಕ್ಕೆ ಕೆಳಭಾಗದಲ್ಲಿ ಸಹಿಯನ್ನು ಪಡೆದಿರುವುದಿಲ್ಲ, ಅದರೆ ಹಾಳೆಯ ಪಕ್ಕದ ಎಡಭಾಗದಲ್ಲಿ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಗೆ ಬರವಣಿಗೆ ಮಾಡಿ ಠಾಣೆಗೆ ಯಾವಾಗ ಕರೆಸಿ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿಯೂ 3 ದಿನದ ನಂತರ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

20. ಬೇಕರಿಯಿಂದ ನೇರವಾಗಿ ಮಾವಿನ ತೋಪಿನ ಬಳಿ ಹೋಗಿರುತ್ತೀರಿಯೇ ಎಂದರೆ ಸಾಕ್ಷಿಯೂ ನಾರಾಯಣ ರವರ ಕಚೇರಿಯ ಬಳಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾರಾಯಣ ರವರ ಕಚೇರಿಯ ಬಳಿ ಏನು ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಅಲ್ಲಿಯೂ ಮಹಜರ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅಲ್ಲಿ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ. ಸದರಿ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ ಸ್ಥಳದಲ್ಲಿ ಅಳತೆ ಏನಾದರೂ ಮಾಡಿರುತ್ತಾರೆಯೇ ಎಂದರೆ ಸಾಕ್ಷಿಯೂ ಅಳತೆ ಮಾಡಿರುತ್ತಾರೆ. ಚಾಸಾ.2 ರವರು ಬಿದ್ದ ಸ್ಥಳವನ್ನು ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ನಕ್ಷೆಯನ್ನು ಮಾಡಿರುವುದಿಲ್ಲ. ಸದರಿ ಮಹಜರ್ ನ್ನು ಬರವಣಿಗೆ ಮಾಡಿ , ಕೊನೆ ಮಾಡಿ 3 ದಿನಗಳ

ನಂತರ ಸಹಿ ಮಾಡುವವರೆಗೆ 5 ನೇ ಆರೋಪಿ ನಿಮ್ಮ ಸಮಕ್ಷಮ ಮಾತುಕತೆ ಮಾಡಿರುತ್ತಾನೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

21. ಘಟನೆ ನಡೆದ ನಂತರ ನ್ಯಾಯಾಲಯದಲ್ಲಿ ಈ ದಿನ ಮೊದಲನೆ ಬಾರಿ ಪೊಲೀಸರು ತೋರಿಸಿದಾಗ ಚಾಕುವನ್ನು ನೋಡಿರುತ್ತೀರಿ ಎಂದರೆ ಸಾಕ್ಷಿಯೂ 2 ನೇ ಬಾರಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಬಾರಿ ಎಲ್ಲಿ ನೋಡಿರುತ್ತೀರಿ ಎಂದರೆ ಸಾಕ್ಷಿಯೂ ಕಾರಿನಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಲಾಂಗ್ ನ್ನು ಸಹ ಇದೇ ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೀರಿ ಎಂದರೆ ಸಾಕ್ಷಿಯೂ 2 ನೇ ಬಾರಿ ನೋಡುತ್ತಿದ್ದು, ಮೊದಲನೇ ಬಾರಿ ಅದನ್ನು ಹಿಡಿದುಕೊಂಡು ಓಡಿ ಹೋಗುತ್ತಿರುವಾಗ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮುದ್ದೆ ಮಾಲು ಹೊಸದಾಗಿದ್ದು, ಉಪಯೋಗಿಸಿರುವುದಿಲ್ಲ ಎಂದರೆ ಸಾಕ್ಷಿಯೂ ಅದರ ಮೇಲೆ ಮಣ್ಣು ಹತ್ತಿದ್ದು, ಅದರಿಂದ ಉಪಯೋಗಿಸಿರುತ್ತಾರೆ ಎಂದು ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯೂ ಮುಂದುವರೆದು ಅದರ ಮೇಲೆ ರಕ್ತ ಇದ್ದು, ಈಗ ಕಂಡು ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಲಾಂಗ್ ನ್ನು ಇತರೆ ಕಾರ್ಯಗಳಿಗೆ ಉಪಯೋಗಿಸಿದ್ದರೆ , ಸದರಿ ಲಾಂಗ್ ಗೆ ಅಲ್ಲಲ್ಲಿ ಡೆಂಟ್ ಆಗುತ್ತದೆ. ಆ ರೀತಿ ಈ ಮುದ್ದೆಮಾಲು–1 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಚಾಕುವನ್ನು ಏನು ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಬಿಳಿ ಬಣ್ಣದ ಬ್ಯಾಗ್ ನಲ್ಲಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಬ್ಯಾಗ್ ನ್ನು ಠಾಣೆಯಿಂದ ತೆಗೆದುಕೊಂಡು ಹೋಗಿರುತ್ತಾರೆಯೇ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಾಗದರೆ ಬ್ಯಾಗ್ ಯಾವ ರೀತಿ ಬಂದಿತ್ತು ಎಂದರೆ ಸಾಕ್ಷಿಯೂ

ಯಾವುದೇ ಉತ್ತರ ನೀಡಿರುವುದಿಲ್ಲ. ಸದರಿ ಬ್ಯಾಗ್ ಚಾಕುವಿನ ಸೈಜ್ ನಷ್ಟೆಯೇ ಇತ್ತೇ ಅಥವಾ ದೊಡ್ಡದಾಗಿತ್ತೇ ಎಂದರೆ ಸಾಕ್ಷಿಯೂ ಚಾಕುಗಿಂತ ಸ್ವಲ್ಪ ದೊಡ್ಡದಾಗಿತ್ತು ಎಂದು ನುಡಿಯುತ್ತಾರೆ.

22. ನಾನು ಘಟನೆ ನಡೆಯಿತು ಎಂದು ಹೇಳಲಾದ ದಿನ 1 ನೇ ಮತ್ತು 5 ನೇ ಆರೋಪಿ ಆಯುಧ ಹಿಡಿದುಕೊಂಡು ಓಡಿ ಹೋಗುತ್ತಿರುವುದು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಟೋದಲ್ಲಿ ಘಟನಾ ಸ್ಥಳಕ್ಕೆ ಬಂದಿರುತ್ತೇನೆ ಎಂದು ಹೇಳಿದ್ದು, ಆ ಸಮಯದಲ್ಲಿ ಕತ್ತಲಾಗಿತ್ತು ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಮುಂದುವರೆದು ಲೈಟ್ ಇತ್ತು ಎಂದು ನುಡಿಯುತ್ತಾರೆ. ಆ ಕಾರಣದಿಂದ ಆರೋಪಿತರು ಓಡಿ ಹೋಗಿರುವುದನ್ನು ನಾನು ನೋಡಿರುವುದಿಲ್ಲ, ಸದರಿ ವಿಚಾರದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಕಾಲದಲ್ಲಿ ಕಾರ್ ಡಿಕ್ಕಿಯಲ್ಲಿ ಚಾಕು ಸಿಕ್ಕಿತ್ತು, ಅದನ್ನು ಅಮಾನತ್ತುಪಡಿಸಿಕೊಂಡರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

23. ನಿಪಿ.11 ರಲ್ಲಿ ಕಾಣುವ ವ್ಯಕ್ತಿ ಗಾಯಾಳು ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳಲಾದ ಒಂದು ತಿಂಗಳ ಬಳಿಕ ಸದರಿ ಫೋಟೋಗಳನ್ನು ತೆಗೆಯಲಾಗಿರುತ್ತದೆ. ನಿಪಿ.11 ರಿಂದ 13 ರಲ್ಲಿ 5 ನೇ ಆರೋಪಿ ಸ್ಥಳವನ್ನು ತೋರಿಸಿರುವುದು ಕಂಡಬರುವುದಿಲ್ಲ ಎಂದರೆ ಸರಿ. ಕಾರ್ ಡಿಕ್ಕಿಯನ್ನು ಯಾರು ತೆಗೆದಿರುತ್ತಾರೆ ಎಂದರೆ ಸಾಕ್ಷಿಯೂ ಗುಂಡ ತೆಗೆದಿರುತ್ತಾನೆ ಎಂದು ನುಡಿಯುತ್ತಾರೆ. ಅದಕ್ಕೆ ಕೀ ಹೇಗೆ ಉಪಯೋಗಿಸಿರುತ್ತಾನೆ ಎಂದರೆ ಸಾಕ್ಷಿಯೂ ಪೊಲೀಸರು ಕೀ ಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಕಾರಿನ ಡಿಕ್ಕಿಯನ್ನು ಓಪನ್ ಮಾಡು ಎಂದು

ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.16 ಮತ್ತು 17 ಪೋಟೋಗಳ ಪ್ರಕಾರ ಚಾಕು ತೆಗೆದ ತಕ್ಷಣ ಚೀಲ ತಯಾರಿದ್ದು, ಅದರಲ್ಲಿ ಹಾಕಿರುತ್ತಾರೆ ಎಂದರೆ ಸರಿ. ನಿಪಿ.18 ರಲ್ಲಿರುವ ವ್ಯಕ್ತಿ ಯಾರು ಎಂದರೆ ಸಾಕ್ಷಿಯೂ ನಟರಾಜ್ ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ನೀವು ಸಹಿ ಮಾಡಿರುವುದಿಲ್ಲ, ಕೇವಲ ನಟರಾಜ್ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ನಾನು ಕೂಡ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.18 ಪೋಟೋದಲ್ಲಿ ನಟರಾಜ್ ಪೇಪರ್ ನ ಮಧ್ಯದಲ್ಲಿ ಸಹಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ನಿಪಿ.19 ರಲ್ಲಿರುವ ವ್ಯಕ್ತಿ ಯಾರು ಎಂದರೆ ಸಾಕ್ಷಿಯೂ ನಾನು ಎಂದು ನುಡಿಯುತ್ತಾರೆ. ನಿಪಿ.19 ರಲ್ಲಿ ನೀವು ಹಾಳೆಯ ಮೇಲ್ಭಾಗದಲ್ಲಿ ಸಹಿ ಮಾಡುತ್ತಿದ್ದು, ಹಾಳೆಯ ಎಡ ಭಾಗದಲ್ಲಿ ಸಹಿ ಮಾಡುತ್ತಿಲ್ಲ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಈ ರೀತಿ ನಿಂತಾಗ ಪೋಟೋ ತೆಗೆಯುತ್ತೇನೆ ಎಂದು ಹೇಳಿದ್ದು, ಪೊಲೀಸರು ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 2 ರಿಂದ 5 ನೇ ಆರೋಪಿ ಪರ ವಕೀಲರಿಂದಃ**

**(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. )**

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**